Sri H. SIDDAVEERAPPA.—That was the answer given yesterday.

ಶ್ರೀ ಎಲ್. ಸಿದ್ದಪ್ಪ —1949-50ನೆಯ ಸಾಲಿನಿಂದ ತುಂಗಭದ್ರಾ ಮತ್ತು ತುಂಗಾನದಿಗಳ ಎರಡು ಪಕ್ಕದಲ್ಲಿರುವ ಗ್ರಾಮಗಳಿಗೆ ಎದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ಶಿವಮೊಗ್ಗ ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿಯವರೂ ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕಮಿಟಿಯವರೂ ಮನವಿಮಾಡಿಕೊಳ್ಳುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಎಲ್. ಸಿದ್ದಪ್ಪ.—ಅದರಂತೆ ಕೊಟ್ಟಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ. —ಕೊಟ್ಟಿದೆ.

ಶ್ರೀ ಎಲ್. ಸಿದ್ದಪ್ಪ.—ಭದ್ರಾವತಿ ನದಿಯ ಪಕ್ಕದ ಗ್ರಾಮಗಳಲ್ಲಿ ಇನ್ನೂ ಎಷ್ಟೋ ಗ್ರಾಮಗಳು ಬಿಟ್ಟು ಹೋಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಪೂರಾ ಕೊಡಲಕ್ಕಾಗಲ್ಲ.

ಶ್ರೀ ಎಲ್. ಸಿದ್ದಪ್ಪ.—ಆ ಪ್ರದೇಶದಲ್ಲ ನದಿಯ ಸೌಕರ್ಯವಿರುವುದರಿಂದ, ಅಲ್ಲಿ lift irrigation ಹಾಕುವುದಕ್ಕೆ ಹೆಚ್ಚು ಅವಕಾಶವಿದೆಯಲ್ಲವೇ ?

Sri H. SIDDAVEERAPPA.—That is why we have taken it up. The policy of the Government is to admit or to grant lift irrigation facilities for the whole length of the Tungabhadra river.

ಶ್ರೀ ಎಲ್. ಸಿದ್ದಪ್ಪ.—ಈಗ ಬಿಟ್ಟಿರುವ, ಭದ್ರಾವತಿ ತಾಲ್ಲೂಕಿನಲ್ಲಿನ ಗ್ರಾಮಗಳಿಗೂ 53-54ನೆಯ ಸಾಲಿನಲ್ಲಾದರೂ ವಿದ್ಯುಚ್ಛಕ್ತಿ ಒದಗಿಸುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಆಲೋಚನೆ ಮಾಡುತ್ತೇವೆ.

9 A. M.

Sri H. SIDDAVEERAPPA.—I had promised to give the information to Sri Sankare Gowda.

ಶ್ರೀ ಕೆ. ಎ. ಶಂಕರಗೌಡ.—ಮಂಡ್ಯ ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ ಕ್ಷಾಮ ಪರಿಸ್ಥಿತಿಯಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ನಾಗಮಂಗಲ, ಕೃಷ್ಣರಾಜಪೇಟೆ ಮತ್ತು ಪಾಂಡವಪುರದ ಕೆಲವು ಭಾಗಗಳು.

ಶ್ರೀ ಕೆ. ಎ. ಶಂಕರಗೌಡ.—ಮದ್ದೂರು ತಾಲ್ಲೂಕಿನಲ್ಲಲ್ಲವೆ, ಕೆಲವು ಭಾಗದಲ್ಲ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

---

## Trained Primary School Teachers in the State.

*Q.*—88. Sri G. NARAYANA GOWDA (Mulbagal-Srinivaspur).—Will the Government be pleased to state :—

(*a*) the number of Primary School Teachers in the State ?

(*b*) of them, the number that has been trained ?

*A.*—Sri A. G. RAMACHANDRA RAO (Minister for Law and Education).—

(*a*) 20,883 (includes teachers in N.T.M. Schools also).

(*b*) 6,287.

ಶ್ರೀ ಜಿ. ನಾರಾಯಣಗೌಡ.—20,883 ಜನ ಪ್ರೈಮರಿ ಸ್ಕೂಲು ಉಪಾಧ್ಯಾಯರುಗಳಿದ್ದಾರೆಂದು ತಿಳಿಸಿದ್ದೀರಿ ; ಇವರಲ್ಲಿ ಎಸ್.ಎಸ್.ಎಲ್.ಸಿ. ಆದವರೆಷ್ಟು ಜನರಿದ್ದಾರೆ ?

Sri A. G. RAMACHANDRA RAO.—The question is regarding the trained and untrained.

Mr. SPEAKER.—The question is about training.

ಶ್ರೀ ಜಿ. ನಾರಾಯಣಗೌಡ.—ಹಿಂದೆ ಪೇ ಕಮಿಟಿಯ ಶಿಫಾರಸಿನಲ್ಲಿ ಪ್ರಾಥಮಿಕ ಶಾಲೆಗಳಲ್ಲಿಯೂ ಎಸ್.ಎಸ್.ಎಲ್.ಸಿ. ಆದ ಉಪಾಧ್ಯಾಯರಿಗೆ 40 ರೂಪಾಯಿ ಪ್ರಾರಂಭ ಸಂಬಳ ಕೊಡಬೇಕೆಂದಿದೆಯಲ್ಲವೆ ?

Mr. SPEAKER.—He wants notice.

ಶ್ರೀ ಜಿ. ನಾರಾಯಣಗೌಡ.—ಸುಮಾರು 80 ಜನರು ಎಸ್ಎಸ್.ಎಲ್.ಸಿ. ಆಗಿರುವ ಉಪಾಧ್ಯಾಯರಿಗೆ ಪ್ರೈಮರಿ ಶಾಲಾ ಉಪಾಧ್ಯಾಯರ ತಲಬನ್ನೇ ಕೊಡುತ್ತಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇರಬಹುದು ಪ್ರೈಮರಿ ಶಾಖೆಗಳ ಉಪಾಧ್ಯಾಯರಿಗೆ ಮತ್ತು ಮಾಧ್ಯಮಿಕ ಶಾಲೆ ಉಪಾಧ್ಯಾಯರಿಗೆ ಬೇರೆ ಬೇರೆ ಸಂಬಳದ ಗ್ರೇಡುಗಳಿವೆ, ಅದರಂತೆ ಪಡೆಯುತ್ತಿದ್ದಾರೆ.

ಶ್ರೀ ಜಿ. ನಾರಾಯಣಗೌಡ.—ಆದರೆ, ಪೇ ಕಮಿಷ್ಟ ಶಿಫಾರಸಿನ ಪ್ರಕಾರ ಅವರು ಎಲ್ಲೇ ಇರಲಿ ಎಸ್.ಎಸ್.ಎಲ್.ಸಿ. ಮಾಡಿದ್ದರೆ ಅವರಿಗೆ 40 ರೂಪಾಯಿ ಪ್ರಾರಂಭದ ಸಂಬಳ ಕೊಡಬೇಕೆಂದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇರಬಹುದು.

ಶ್ರೀ ಜಿ. ನಾರಾಯಣಗೌಡ.—ಅವರಿಗೆ ನ್ಯಾಯ ದೊರಕಿಸುವ ರೀತಿಯಲ್ಲಿ ಪರಿಶೀಲನೆ ಮಾಡುತ್ತಿರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರಿಗೇನೂ ಅನ್ಯಾಯವಾಗಿಲ್ಲವೆಂದು ಸರಕಾರದ ಅಭಿಪ್ರಾಯ.

ಶ್ರೀ ಜಿ. ನಾರಾಯಣಗೌಡ.—6,287 ಜನರಿಗೆ ಟ್ರೈನಿಂಗ್ ಆಗಿದೆಯೆಂದು ತಿಳಿಸಲಾಗಿದೆ ಇನ್ನು ಮೇಲೆ ಕೆಲಸಕ್ಕೆ ನೇಮಿಸಿದ ಕಾಲದಲ್ಲೇ ಟ್ರೈನಿಂಗ್ ಕೊಡುವುದನ್ನು ಪರಿಶೀಲನೆಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ. ಎಸ್. ಬೋರಣ್ಣಗೌಡ.—ಕೆಲವು ಪ್ರೈಮರಿ ಸ್ಕೂಲು ಉಪಾಧ್ಯಾಯರನ್ನು ಮಿಡ್ಲ್ ಸ್ಕೂಲು ಉಪಾಧ್ಯಾಯರಾಗಿ ಪ್ರೊಮೋಟ್ ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೆಲವರನ್ನು ಮಾಡಿರಬಹುದು.

ಶ್ರೀ ಬಿ. ಎಸ್. ಬೋರಣ್ಣಗೌಡ.—ಹಾಗಿದ್ದರೆ ಅವರಿಗೆ ಮಿಡ್ಲ್‌ಸ್ಕೂಲು ಉಪಾಧ್ಯಾಯರ ಗ್ರೇಡನ್ನು ಕೊಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಿಡ್ಲ್ ಸ್ಕೂಲಿಗೆ ಹೋದರೆ ಅಲ್ಲಿಯ ಗ್ರೇಡನ್ನು ಕೊಡುತ್ತಾರೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಮಿಡ್ಲ್ ಸ್ಕೂಲಿಗೆ ಹೋದರೂ ಅವರಿಗೆ ಪ್ರೈಮರಿ ಸ್ಕೂಲು ಗ್ರೇಡನ್ನು ಕೊಡುತ್ತಿದ್ದಾರೆಂದು ಸುಮಾರು ನೂರು ಜನ ಉಪಾಧ್ಯಾಯರು ಮನವಿಕೊಟ್ಟಿದ್ದಾರೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ವಿ. ಮುನಿಯಪ್ಪ.—ಉತ್ತರದಲ್ಲಿ 20,883 ಜನ ಉಪಾಧ್ಯಾಯರ ಪೈಕಿ 6287 ಜನರಿಗೆ ಶಿಕ್ಷಣ ಕೊಡಲಾಗಿದೆಯೆಂದು ತಿಳಿಸಿದ್ದೀರಿ ; ಬಾಕಿ 14596 ಜನರಿಗೆ ಶಿಕ್ಷಣಕೊಡುವುದಕ್ಕೆ ವ್ಯವಸ್ಥೆಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡಬೇಕು.

ಶ್ರೀ ವಿ. ಮುನಿಯಪ್ಪ.—ಈ ರೀತಿ ಶಿಕ್ಷಣಕ್ಕೆ ವ್ಯವಸ್ಥೆಯಿಲ್ಲದೆ 14 ಸಾವಿರ ಜನರಿಗೆ ಶಿಕ್ಷಣವಿಲ್ಲದೆಯಿರುವುದರಿಂದ, ವಿದ್ಯಾರ್ಥಿಗಳಿಗೆ ಬಹಳ ಅನಮರ್ಪಕವಾದ ಶಿಕ್ಷಣ ದೊರೆಯುತ್ತಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರಿಗೆ ಶಿಕ್ಷಣ ವಿಲ್ಲವೆಂಬುದನ್ನು ಸರ್ಕಾರ ಮನಗಂಡಿದೆ.

ಶ್ರೀ ಆರ್. ಮುನಿಸ್ವಾಮಯ್ಯ.—ಉಪಾಧ್ಯಾಯರ ಟ್ರೈನಿಂಗ್ ಪರೀಕ್ಷೆಗೆ ಸ್ವಂತ ವ್ಯಾಸಂಗದಿಂದ ಕುಳಿತು ಕೊಳ್ಳುವುದಕ್ಕೆ ಅವಕಾಶಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ಪಿಸ್‌ನಲ್ಲಿರಬೇಕು.

ಶ್ರೀ ಆರ್. ಮುನಿಸ್ವಾಮಯ್ಯ.—ಪಾಶ್ಚಿಮಾತ್ಯ ದೇಶಗಳಲ್ಲಿ ಪ್ರೈವೇಟಾಗಿ ಓದಿ ಪರೀಕ್ಷೆಗೆ ಕುಳಿತು ಕೊಳ್ಳಲು ಅವಕಾಶವಿದೆಯೆಂಬುದು ಗೊತ್ತಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಇಲ್ಲಿಯೂ ಹಾಗೆ ಮಾಡಿದರೆ ಸರ್ಕಾರಕ್ಕೆ ಪೆಚ್ಚು ಕಡಮೆಯಾಗುವುದಿಲ್ಲವೆ ?

(ಉತ್ತರವಿಲ್ಲ)

Sri A. V. NARASIMHA REDDY.—What is the minimum qualification required for the appointment of primary school teachers ?

Sri A. G. RAMACHANDRA RAO.—Middle School Examination.

Sri A. V. NARASIMHA REDDY.—Has it come to the notice of the Government that some lady teachers appointed for girls' primary schools are not at all qualified even to that extent to which it is required now ?

Sri A. G. RAMACHANDRA RAO.—It has not come to the notice of Government.

ಶ್ರೀಮತಿ ಬಳ್ಳಾರಿ ಸಿದ್ಧಮ್ಮ.—ಇದರಲ್ಲಿ ಗ್ರಾಂಟು ಸ್ಕೂಲುಗಳು ಸೇರಿವೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದು ಸರ್ಕಾರಿ ಸ್ಕೂಲುಗಳಿಗೆ ಮಾತ್ರ ಸಂಬಂಧ ಪಟ್ಟದ್ದು.

ಶ್ರೀ ಪಿ. ಆರ್. ರಾಮಯ್ಯ.—6,287 ಜನ ಉಪಾಧ್ಯಾಯರಿಗೆ ಟ್ರೈನಿಂಗ್ ಆಗಿದೆಯೆಂದು ತಿಳಿಸಿದಿ; ಇದರಲ್ಲಿ ಬೇಸಿಕ್ ಸ್ಕೂಲು ಉಪಾಧ್ಯಾಯರಿಗೂ ಟ್ರೈನಿಂಗ್ ಆಗಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೆಲವರಿಗೆ ಆಗಿದೆ.

ಶ್ರೀ ಪಿ. ಆರ್. ರಾಮಯ್ಯ.—ಎಷ್ಟು ಜನರಿಗಾಗಿದೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ಮೇಲೆ ಹೇಳುತ್ತೇನೆ.

ಶ್ರೀ ಜಿ. ದುಗ್ಗಪ್ಪ.—ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಪೈಕಿ ಎಷ್ಟು ಜನರಿಗೆ ಟ್ರೈನಿಂಗ್ ವಿಷಯದಲ್ಲಿ ರಿಯಾಯಿತಿ ತೋರಿಸಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಾಕಿ 14 ಸಾವಿರ ಚಿಲ್ಲರೆ ಜನರು ರಿಯಾಯಿತಿ ಮೇಲೆಯೇ ಇದ್ದಾನೆಂದು ಭಾವಿಸಬೇಕು.

ಶ್ರೀ ಜಿ. ದುಗ್ಗಪ್ಪ.—35 ವರ್ಷ ವಯಸ್ಸಿಗೆ ಮೇಲ್ಪಟ್ಟ ಉಪಾಧ್ಯಾಯರಿಗೆ ರಿಯಾಯಿತಿ ತೋರಿಸಿದ್ದೀರಿ; ಇಂಥವರೆಷ್ಟು ಜನರಿಗೆ ಇದು ದೊರೆತಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

---

*Educational Reforms.*

*Q.*—89. Sri G. NARAYANA GOWDA (Mulbagal-Srinivaspur).—Will the Government be pleased to state :—

(*a*) whether the Education Reforms Committee has completed its work ;

(*b*) if so, the recommendations of that Committee ;

(*c*) the action taken by Government regarding those recommendations ?

*A.*—Sri A. G. RAMACHANDRA RAO (Minister for Law and Education).—

(*a*) Yes.

(*b*) Copies of the report will be distributed to the Hon'ble Members of the Assembly.

(*c*) The proposals are under consideration.

Sri G. NARAYANA GOWDA.—I have no supplementaries.

---

*Q.*—281. Sri K. LAKKAPPA (Channarayapatna).—Will the Government be pleased to state :—

(*a*) whether any final report has been submitted to Government by the Educational Reforms Committee ;

(*b*) whether they have accepted their report ;

(*c*) when they will implement the accepted Educational Reforms ;

(*d*) whether these Reforms involve any extra cost ; if so, how much annually ?